# ನಗರಸಭಾ ಕಾರ್ಯಾಲಯ, ರಾಣೇಬೆನ್ನೂರು

ಸಂಖ್ಯೆ ನಸರಾ:ಕಾಮಗಾರಿ:12ನೇಹಯೋ:ರ.ಸೆ.ನಿ:ವಹಿ:2007–08 ದಿನಾಂಕ:05/05/2007

## –: ಅಲ್ಪಾವಧಿ ಟೆಂಡರ್ ಪ್ರಕಟಣೆ :–

ಕರ್ನಾಟಕ ಪುರಸಭೆ ಕಾಯಿದೆ 1964 ಹಾಗೂ ಕ.ಸಾ.ಸಂಪಾ.ಅ 1999 (ತಿದ್ದುಪಡಿ ನಿಯಮಗಳಂತೆ)ರ ಪ್ರಕಾರ ಲೋಕೋಪಯೋಗಿ ಇಲಾಖೆಯ ಸಿವಿಲ್ ಗುತ್ತಿಗೆದಾರರೆಂದು ಲೈಸೆನ್ಸ್ ಪಡೆದ ರಾಣೆಬೆನ್ನೂರ ನಗರಸಭೆಯ ಕಛೇರಿಯಲ್ಲಿಯೂ ಸಹ ಗುತಿಗೆದಾರರೆಂದು ನೊಂದಾಯಿಸಿದವರಿಗೆ ತಿಳಿಯಪಡಿಸುವುದೇನೆಂದರೆ, 12ನೇ ಹಣಕಾಸು ಯೋಜನೆಯ ರಸ್ತೆ & ಸೇತುವೆ ನಿರ್ವಹಣೆಗಾಗಿ ಬಿಡುಗಡೆಯಾದ 2ನೇ ಕಂತಿನ ಅನುದಾನದಲ್ಲಿ ಈ ಕೆಳಕಂಡ 7 ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಣಯಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ದ್ವಿಪ್ರತಿಗಳಲ್ಲಿ ಐಟಂವಾರು ಟೆಂಡರನ್ನು ಕರೆಯಲಾಗಿದೆ.

| ಅ. ನಂ. | ಕಾಮಗಾರಿಗಳ ವಿವರ | ಅಂದಾಜು ರಕಂ | ಇ.ಎಂ.ಡಿ. ಹಣ |
|---|---|---|---|
| 1 | 2 | 3 | 4 |
| 1. | ವಿ.ನಂ.31 ಬೀರೇಶ್ವರ ನಗರ 1ನೇ ಮುಖ್ಯ ರಸ್ತೆಗೆ (ಹಾಟ್‌ಮಿಕ್ಸ್ ಮಿಶ್ರಣದಿಂದ) ಡಾಂಬರೀಕರಣ ಮಾಡುವುದು. | 1,48,000/– | 3700/– |
| 2. | ವಿ.ನಂ.31 ಹಳೇ ಅಂತರವಳ್ಳಿ ರಸ್ತೆ ಬಾಜು ವಿದ್ಯಾನಗರ 3ನೇ ಮತ್ತು 5ನೇ ಕ್ರಾಸ್ ರಸ್ತೆಗಳಿಗೆ (ಹಾಟ್ ಮಿಕ್ಸ್ ಮಿಶ್ರಣದಿಂದ) ಡಾಂಬರೀಕರಣ ಮಾಡುವುದು. | 1,78,000/– | 4450/– |
| 3. | ಬನಶಂಕರಿ ನಗರ ರಸ್ತೆ ಮರು ಡಾಂಬರೀಕರಣ ಮಾಡುವುದು. | 5,35,000/– | 10,700/– |
| 4. | ವಿ.ನಂ.30ರ ಹಲಗೇರಿ ರಸ್ತೆಯ ಕುರಬಗೇರಿ ಕ್ರಾಸ್ ರಸ್ತೆಗೆ (ಹಾಟ್‌ಮಿಕ್ಸ್ ಮಿಶ್ರಣದಿಂದ) ಮರು ಡಾಂಬರೀಕರಣ ಮಾಡುವುದು. | 3,10,000/– | 7750/– |
| 5. | ವಿ.ನಂ.13ರ ಸೈಕಲ್‌ಗಾರ ಓಣಿ, ಜುಮ್ಮಾ ಮಸೀದಿ ರಸ್ತೆ, ಟೆಂಪೊ ಸ್ಟ್ಯಾಂಡ್ ರಸ್ತೆಗಳಿಗೆ (ಹಾಟ್‌ಮಿಕ್ಸ್ ಮಿಶ್ರಣದಿಂದ) ಮರು ಡಾಂಬರೀಕರಣ ಮಾಡುವುದು. | 3,23,000/– | 8075/– |
| 6. | ವಿ.ನಂ.30ರ ಕನಕದಾಸ ನಗರದ 1ನೇ ಮುಖ್ಯರಸ್ತೆಯಿಂದ ಸಿದ್ದಪ್ಪ ಗುಡಗಿ ಮನೆವರೆಗೆ (ಹಾಟ್‌ಮಿಕ್ಸ್ ಮಿಶ್ರಣದಿಂದ) ಮರು ಡಾಂಬರೀಕರಣ ಮಾಡುವುದು. | 3,20,000/– | 8000/– |
| 7. | ವಿ.ನಂ.23 ರಾಷ್ಟ್ರೀಯ ಹೆದ್ದಾರಿ ನಂ.4 ರಿಂದ ಬಳ್ಳಾರಿ ಕಲ್ಯಾಣ ಮಂಟಪದ ಮುಂದಿನ ರಸ್ತೆ ಹಾಗೂ ಪಕ್ಕದ ರಸ್ತೆಗಳಿಗೆ (ಹಾಟ್‌ಮಿಕ್ಸ್ ಮಿಶ್ರಣದಿಂದ) ಮರು ಡಾಂಬರೀಕರಣ ಮಾಡುವುದು. | 2,68,000/– | 6700/– |

### ಷರತ್ತು ಮತ್ತು ನಿಬಂಧನೆಗಳು

1) ಈ ಕಾಮಗಾರಿಗಳನ್ನು ನಿರ್ವಹಿಸಲು 3ನೇ ದರ್ಜೆ ಹಾಗೂ ಮೇಲ್ಪಟ್ಟು ಅರ್ಹತೆ ಹೊಂದಿದವರಾಗಿರತಕ್ಕದ್ದು. ಹಾಗೂ ಅರ್ಜಿಯ ಜೊತೆ ಗುತ್ತಿಗೆದಾರರು ಬಾವ ಚಿತ್ರ ಸಹಿತದ ಪರವಾನಗಿ ಪತ್ರ (ಪಿ.ಡಬ್ಲ್ಯು.ಡಿ.& ನಗರಸಭೆ)ದ ದೃಢೀಕೃತ ಪ್ರತಿಯನ್ನು ಸಲ್ಲಿಸತಕ್ಕದ್ದು.

2) ಲೋಕೋಪಯೋಗಿ ಇಲಾಖೆಯಲ್ಲಿ ಲೈಸೆನ್ಸ್ ಹೊಂದಿದವರು ನಗರಸಭೆಯಲ್ಲಿಯೂ ಕೂಡ ಚಾಲ್ತಿ ಸಾಲಿನಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು.

3) ಡಾಂಬರೀಕರಣ ಕಾಮಗಾರಿಗಾಗಿ ಟೆಂಡರ್ ಹಾಕುವವರು ಕಾಮಗಾರಿಗೆ ಅವಶ್ಯಕವಾದ ಯಂತ್ರೋಪಕರಣ ಗಳನ್ನು ಸ್ವಂತಕ್ಕೆ ಹೊಂದಿರತಕ್ಕದ್ದು/ಬಾಡಿಗೆ ರೀತಿಯಿಂದ (ದಾಖಲೆ ಸಹಿತ) ಹೊಂದಿದವರು ಸದರಿ ದಾಖಲಾತಿಗಳೊಂದಿಗೆ ಕೆಲಸ ನಿರ್ವಹಿಸಿದ ಅನುಭವ ಪ್ರಮಾಣ ಪತ್ರದೊಂದಿಗೆ ಅರ್ಜಿ ಸಲ್ಲಿಸುವ ದಿನದಂದು ಹಾಜರುಪಡಿಸಿದವರಿಗೆ ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

4) ಕಾಮಗಾರಿ ಕೆಲಸ ಪೂರ್ಣಗೊಳಿಸಬೇಕಾದ ಅವಧಿ 3 ತಿಂಗಳುಗಳಾಗಿರುತ್ತದೆ.



This document was created using SOLID CONVERTER PDF
To remove this message, purchase the product at www.SolidPDF.com

5) ರೂ.5.00 ಲಕ್ಷಗಳಿಗೆ ಮೇಲ್ಪಟ್ಟ ಕಾಮಗಾರಿ ಟೆಂಡರ್ ನಮೂನೆಯ ಬೆಲೆ ರೂ.1,000/– + ತೆರಿಗೆ. ರೂ.5.00 ಲಕ್ಷಗಳಿಗಿಂತ ಕಡಿಮೆ ಮೊತ್ತದ ಕಾಮಗಾರಿ ಟೆಂಡರ್ ನಮೂನೆಯ ಬೆಲೆ ರೂ.500/– + ತೆರಿಗೆ.

6) ಟೆಂಡರ್ ನಮೂನೆ ಸಲುವಾಗಿ ಅರ್ಜಿಗಳನ್ನು ಈ ಕಛೇರಿಯಲ್ಲಾಗಲಿ ಅಥವಾ ಮಾನ್ಯ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ ಹಾವೇರಿ ಇಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 15/05/2007 ಸಂಜೆ 5.30 ರ ಒಳಗಾಗಿ ಇರುತ್ತದೆ. ಟೆಂಡರ್ ನಮೂನೆಯ ಶುಲ್ಕವನ್ನು ಆ ದಿನವೇ ಪಾವತಿಸತಕ್ಕದ್ದು.

7) ತಯಾರಿಸಿದ ಟೆಂಡರ್ ನಮೂನೆಗಳನ್ನು ಗುತ್ತಿಗೆದಾರರಿಗೆ ಈ ಕಾರ್ಯಾಲಯದಲ್ಲಿ ದಿನಾಂಕ: 18/05/2007 ರಿಂದ ಕಛೇರಿ ವೇಳೆಯಲ್ಲಿ ಮಾತ್ರ ನೀಡಲಾಗುವುದು.

8) ಎಲ್ಲಾ ವಿವರಗಳನ್ನು ಭರ್ತಿ ಮಾಡಿದ ಟೆಂಡರ್‌ನ ನಮೂನೆ ಜೊತೆಗೆ ಇ.ಎಂ.ಡಿ.ಹಣವನ್ನು ನಗದಾಗಿ ನಗರಸಭೆ ನಿಧಿಗೆ ಪಾವತಿಸಿ ಅದರ ರಸೀತಿಯೊಂದಿಗೆ ಅಥವಾ ಪೌರಾಯುಕ್ತರ ಪದನಾಮಾಂಕಿತದಲ್ಲಿ ಡಿ.ಡಿ.ಪಡೆದು ದ್ವಿಪ್ರತಿಗಳ ಟೆಂಡರ್ ನಮೂನೆಯೊಂದಿಗೆ ಲಗತ್ತಿಸಿ, ಲಕೋಟೆಯನ್ನು ಸೀಲ್ (ಅರಗಿನಿಂದ) ಮಾಡಿ, ಇದೇ ಉದ್ದೇಶಕ್ಕಾಗಿ ನಗರಸಭೆಯಲ್ಲಿ ಇಡಲಾದ ಅಥವಾ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ ಹಾವೇರಿ ಇಲ್ಲಿ ಇಡಲಾದ ಟೆಂಡರ್ ಪೆಟ್ಟಿಗೆಯಲ್ಲಿ ದಿನಾಂಕ:21/05/2007 ರ 4.30 ಘಂಟೆಗಳೊಳಗಾಗಿ ಹಾಕತಕ್ಕದ್ದು. ನಿಗಧಿತ ಅವಧಿ ನಂತರ ಬರುವ ಟೆಂಡರ್‌ಗಳನ್ನು ಯಾವುದೇ ರೀತಿಯಿಂದಲೂ ಸ್ವೀಕರಿಸಲಾಗುವುದಿಲ್ಲ.

9) ಟೆಂಡರ್ ಬಾಕ್ಸನ್ನು ದಿನಾಂಕ:22/05/2007ರಂದು ರಾಣೇಬೆನ್ನೂರು ನಗರಸಭೆಯಲ್ಲಿ ಲಭ್ಯವಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವುದು.

10) ಟೆಂಡರ್‌ಗಾಗಿ ಪಾವತಿಸಿದ ಇ.ಎಂ.ಡಿ. ಹಣಕ್ಕೆ ಬಡ್ಡಿ ನೀಡಲಾಗುವುದಿಲ್ಲ. ನಾಮಂಜೂರಾದ ಗುತ್ತಿಗೆದಾರರ ಇ.ಎಂ.ಡಿ.ಹಣವನ್ನು ಟೆಂಡರ್ ಮಂಜೂರಾದ ನಂತರ ಹಿಂದಿರುಗಿಸಲಾಗುವುದು.

11) ಮೇಲ್ಕಂಡ ಕಾಮಗಾರಿಗಳು ಪೂರ್ಣಗೊಂಡ ದಿನಾಂಕದಿಂದ ಕಾಮಗಾರಿ ನಿರ್ವಹಣೆಗೆ 2 ವರ್ಷಗಳ ಅವಧಿಗೆ ಗುತ್ತಿಗೆದಾರರು ಯಾವುದೇ ಹೆಚ್ಚಿನ ವೆಚ್ಚವಿಲ್ಲದೇ ನಿರ್ವಹಿಸತಕ್ಕದ್ದು. ಅಲ್ಲಿಯವರೆಗೆ ಇ.ಎಂ.ಡಿ. ಮತ್ತು ಎಸ್.ಡಿ.ಮೊತ್ತ ಹಿಂದಿರುಗಿಸಲಾಗುವುದಿಲ್ಲ.

12) ಗುತ್ತಿಗೆದಾರರು ಕಾಮಗಾರಿಯ ಪ್ರಾರಂಭಿಸಿ ಹಂತ, ಮಧ್ಯಂತರದ ಹಂತದಲ್ಲಿ ಹಾಗೂ ಮುಕ್ತಾಯದ ಹಂತದಲ್ಲಿಯ ಕಾಮಗಾರಿ ನಿರ್ವಹಣೆಯ ಬಾವ ಚಿತ್ರಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.

13) ಈ ಮೇಲೆ ನಮೂದಿಸಿದ ದಿನಾಂಕಗಳಂದು ಸರ್ಕಾರಿ ರಜೆಗಳು ಬಂದಲ್ಲಿ, ಕಛೇರಿಯ ಮುಂದಿನ ದಿನಾಂಕವೆಂದು ಬಾವಿಸತಕ್ಕದ್ದು.

14) ಟೆಂಡರ್ ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಹೊಂದಿರುತ್ತದೆ.

15) ಟೆಂಡರ್‌ಗಾಗಿ ಇ.ಎಂ.ಡಿ. ಹಣ ಪಾವತಿಸದಿರುವ, ಚೆಕ್ಕುಗಳನ್ನು ಲಗತ್ತಿಸಿರುವ ಮತ್ತು ಮಾಹಿತಿ ಅಪೂರ್ಣವಿರುವ ಟೆಂಡರ್‌ಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

16) ಸರ್ಕಾರದ ಹಾಗೂ ಪೌರಾಡಳಿತ ನಿರ್ದೇಶನಾಲಯದ ಇತ್ತೀಚಿನ ಸುತ್ತೋಲೆ ಮತ್ತು ಮಾರ್ಗದರ್ಶನಗಳನ್ವಯ ನಡೆದುಕೊಳ್ಳಲು ಗುತ್ತಿಗೆದಾರರು ಬದ್ದರಾಗಿರತಕ್ಕದ್ದು.

17) ಹೆಚ್ಚಿನ ಮಾಹಿತಿಯನ್ನು ನಗರಸಭೆ ಕಾರ್ಯಾಲಯದ ಕಾಮಗಾರಿ ವಿಭಾಗದಲ್ಲಿ ಅಥವಾ ಕಛೇರಿಯ ವೆಬ್‌ಸೈಟ್ http://www.ranebennurcity.gov.in/TenderNotification/12Financeworks.pdf ರಲ್ಲಿ ಪಡೆಯ ಬಹುದಾಗಿದೆ.

**(ಎಂ.ಆರ್.ಗಿರಡ್ಡಿ)**
ಸ.ಕಾ.ನಿ.ಅಭಿಯಂತರರು
ನಗರಸಭೆ, ರಾಣೇಬೆನ್ನೂರು.

**(ಎಸ್.ಜಿ.ರಾಜಶೇಖರ್)**
ಪೌರಾಯುಕ್ತರು,
ನಗರಸಭೆ, ರಾಣೇಬೆನ್ನೂರು.

**(ಅಮ್ಲಾನ್ ಆದಿತ್ಯ ಬಿಸ್ವಾಸ್) I.A.S.**
ಆಡಳಿತಾಧಿಕಾರಿಗಳು,
ನಗರಸಭೆ, ರಾಣೇಬೆನ್ನೂರು , ಹಾಗೂ
ಜಿಲಾ ದಿಕಾರಿಗಳು. ಹಾವೇರಿ.



This document was created using SOLID CONVERTER PDF
To remove this message, purchase the product at www.SolidPDF.com